ಅ.ದಾ.ನಂ.156/2020
ಡಿ.ಡಬ್ಲೂ:1

**<u>ಸಾಕ್ಷಿಯನ್ನು ಇಂದು ದಿನಾಂಕಃ 21.11.2025 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು</u>**

**<u>ಪಾಟೀ ಸವಾಲುಃ ಶ್ರೀ. ಎಮ್ ಎಚ್ ಕೆ , ವಕೀಲರಿಂದ ವಾದಿ ಪರವಾಗಿ</u>**

1. ನನಗೆ ಮುದಕಪ್ಪ ಯಾನೆ ರಾಯಪ್ಪ ಎಂದು ಕರೆಯುತ್ತಾರೆ ಎಂದರೆ ಸರಿ. ನನಗೆ ಈ ದಾವೆಯಲ್ಲಿ ಮುದಕಪ್ಪ ತಂ ಮಲ್ಲಪ್ಪ ಬಿರಾದಾರ ಎಂದು ಬಂದಿರುವ ಸಮನ್ಸ ಪಡೆದಿರುತ್ತೇನೆ ಎಂದರೆ ಸರಿ. ನಮ್ಮ ತಂದೆಗೆ ನಾನು ಮತ್ತು ಒಬ್ಬಳು ಹೆಣ್ಣು ಮಗಳು ಇರುತ್ತೇವೆ. ನನ್ನ ಅಜ್ಜನ ಹೆಸರು ಅಮರಪ್ಪ ತಂ. ನಾಗನಗೌಡ ಬಿರಾದಾರ ಎಂದರೆ ಸರಿ. ನನಗೆ ವಾದಿ ಗೊತ್ತಿರುತ್ತಾರೆ. ವಾದಿಯ ತಂದೆಯ ಹೆಸರು ಶೇಷಪ್ಪ ಯಾನೆ ಶೇಷಣ್ಣ ಎಂದರೆ ಸರಿ. ಶೇಷಪ್ಪನಿಗೆ ವಾದಿ ಮತ್ತು ಸದಾವಶಿವ ಎಂಬ ಇಬ್ಬರು ಮಕ್ಕಳು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ.

2. ದಾವಾ ಆಸ್ತಿಯ ಸರ್ವೇ ನಂ.50 ಇರುತ್ತದೆ. ದಾವಾ ಆಸ್ತಿಯ ಒಟ್ಟು ವಿಸ್ತೀರ್ಣ 07 ಎಕರೆ 06 ಗುಂಟೆ ಇರುತ್ತದೆ. ರಾಜನಾಳ ಗ್ರಾಮದ ಸರ್ವೇ ನಂ.50 ರಲ್ಲಿ ಒಟ್ಟು ವಿಸ್ತೀರ್ಣ 25 ಎಕರೆ ಮೇಲೆ ಗುಂಟೆ ಇರುತ್ತದೆ ಎಂದು ಹೇಳುತ್ತಾರೆ. ದಾವಾ ಆಸ್ತಿಯ ಸರ್ವೇ ನಂ.50 ರ ಆಸ್ತಿಯು ಮೂಲ ಯಾರ ಹೆಸರಿನಲ್ಲಿ ಇತ್ತು ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯು ಸರ್ವೇ ನಂ.50 ರ ಆಸ್ತಿಯಲ್ಲಿ ಪೂರ್ವ ದಿಕ್ಕಿಗೆ ಬರುತ್ತದೆ. ದಾವಾ ಆಸ್ತಿಯ ಚಕಬಂದಿ ನನಗೆ ಹೇಳಲು ಬರುತ್ತದೆ. ದಾವಾ ಆಸ್ತಿಯ ಪೂರ್ವಕ್ಕೆಃ ಶಂಕ್ರಮ್ಮ ನಾಗರಾಳರವರ ಜಮೀನು, ಪಶ್ಚಿಮಕ್ಕೆಃ ರಾಮಪ್ಪ ಪರಪ್ಪ ಬಿರಾದಾರರವರ ಜಮೀನು ಅದು ಬೇರೆ ಸರ್ವೇ ನಂಬರ ಇರುತ್ತದೆ. ಸದರಿ ಬೇರೆ ಸರ್ವೇ ನಂಬರ ನನಗೆ ಹೇಳಲು ಬರುವುದಿಲ್ಲ. ದಾವಾ ಆಸ್ತಿ ಉತ್ತರಕ್ಕೆಃ ನರಸಪ್ಪ ಚಪ್ಪರಬಂದರವರ ಜಮೀನು ಇರುತ್ತದೆ . ಆದರೆ ಸರ್ವೇ ನಂಬರ ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ದಕ್ಷಿಣಕ್ಕೆಃ ಸಂಗನಗೌಡ

ಅಮರಪ್ಪಗೌಡ ಬಿರಾದಾರವರ ಜಮೀನು ಬರುತ್ತದೆ . ಆದರೆ ಅದರ ಸರ್ವೆ ನಂಬರ ನನಗೆ ಗೊತ್ತಿಲ್ಲ. ದಾವಾ ಆಸ್ತಿಯಲ್ಲಿ ವಾದಿಯು ಸ್ವಾಧೀನಾನುಭವದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ.

3. ನನ್ನ ಅಜ್ಜನಾದ ಅಮರಪ್ಪ ತಂ.ನಾಗನಗೌಡ ಬಿರದಾರವರು ವಾದಿ, ವಾದಿಯ ತಂದೆ ಮತ್ತು ಅವರ ಸಹೋದರರ ಮೇಲೆ ಅಸಲು ದಾವೆ ನಂ.13/1965 ರಂತೆ ಈ ದಾವೆಯಲ್ಲಿರುವ ದಾವಾ ಆಸ್ತಿಯ ಕುರಿತು ದಾವೆಯನ್ನು ಸಲ್ಲಿಸಿದ್ದರು ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ನನ್ನ ಅಜ್ಜನು ಸರ್ವೆನಂ.50 ವಿಸ್ತೀರ್ಣ 25 ಎಕರೆ 20 ಗುಂಟೆ ಜಮೀನವು ಈ ದಾವೆಯಲ್ಲಿರುವ ವಾದಿಗಳ ಒಟ್ಟು ಕುಟುಂಬದ ಆಸ್ತಿ ಎಂದು ಹೇಳಿದ್ದರು ಎಂದರೆ ಸರಿಯಲ್ಲ. ಸದರಿ ದಾವೆಯನ್ನು ಈ ದಾವೆಯಲ್ಲಿರುವ ದಾವಾ ಆಸ್ತಿಯ ಕುರಿತು ನನ್ನ ಅಜ್ಜನು ಕರಾರಿನ ನಿರ್ಧಿಷ್ಟ ನೇರವೇರಿಕೆಯ ಪರಿಹಾರವನ್ನು ಕೋರಿ ಸಲ್ಲಿಸಿದ್ದರು ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ನನ್ನ ಅಜ್ಜನಿಗೆ ರೂ.850/-ಗಳನ್ನು ಪ್ರತಿಶತ 12 ರಷ್ಟು ಬಡ್ಡಿಯೊಂದಿಗೆ ಮರುಪಾವತಿಸಲು ಆದೇಶವಾಗಿರುತ್ತದೆ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ,

**ಹೆಚ್ಚುವರಿ ಸಿವಿಲ್ ವ ಜೆ ಎಮ್ ಎಫ್ ಸಿ ನ್ಯಾಯಾಧೀಶರು,**
**ಬಸವನ ಬಾಗೇವಾಡಿ.**